**ಪ್ರಧಾನ ನಗರ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ನಗರ (ಸಿಸಿಹೆಚ್ -1) ರವರ ನ್ಯಾಯಾಂಗಣದಲ್ಲಿ**

**ಎಸ್.ಸಿ. ಸಂಖ್ಯೆಃ 1139/2015**

**ಚಾ.ಸಾ.- 7 ಫ್ರಾಸಾ.- 6**

**ದಿಃ16.09.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

| | |
|---|---|
| ಹೆಸರು | ಸಾವಿತ್ರಮ್ಮ |
| ಗಂಡನ ಹೆಸರು | ಕೃಷ್ಣ |
| ವಯಸ್ಸು | 36 ವರ್ಷಗಳು |
| ವೃತ್ತಿ | ಗೃಹಿಣಿ |
| ವಿಳಾಸ | ಬಾಗಲಗುಂಟೆ , ಬೆಂಗಳೂರು |

ಮುಖ್ಯವಿಚಾರಣೆ ಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ

ಈ ಮೊಕದ್ದಮೆಗೆ ಸಂಬಂಧಪಟ್ಟಂತೆ ಮೃತ ಲಕ್ಷ್ಮಮ್ಮ ನನ್ನ ತಾಯಿ. ನನ್ನ ತಾಯಿ ಲಕ್ಷ್ಮಮ್ಮ ತೀರಿಕೊಂಡು 7 ವರ್ಷಗಳಾದವು. ನನ್ನ ತಾಯಿ ಸಹ ಬಾಗಲಗುಂಟೆಯಲ್ಲಿ ಪ್ರತ್ಯೇಕವಾಗಿ ವಾಸಮಾಡಿಕೊಂಡಿದ್ದಳು. ನನ್ನ ತಾಯಿ ಹೂವು ಮತ್ತು ತರಕಾರಿ ಮಾರಾಟ ಮಾಡುತ್ತಿದ್ದಳು. ಈಗ ನ್ಯಾಯಾಲಯದ ಮುಂದೆ ವಿ.ಸಿ ಮೂಲಕ ಹಾಜರುಪಡಿಸಿರುವ ಆರೋಪಿ ನನಗೆ ಗೊತ್ತು . ಅವನ್ನು ನನ್ನ ತಾಯಿಗೆ ಪರಿಚಯದವನಾಗಿದ್ದ. ನನ್ನ ತಾಯಿ ಲಕ್ಷ್ಮಮ್ಮಳನ್ನು ಆರೋಪಿ ಜಗದೀಶ ಕತ್ತು

ಹಿಸುಕಿ ಕೊಲೆ ಮಾಡಿದ್ದಾನೆ. ಹಾಗೆ ಆರೋಪಿಯು ನನ್ನ ತಾಯಿಯನ್ನು ಕತ್ತು ಹಿಸುಕಿ ಸಾಯಿಸಿರುವ ಬಗ್ಗೆ ಹಾಗೆ ನೋಡಿದ ಅಕ್ಕಪಕ್ಕದ ಜನರು ಹೇಳಿದ್ದಾರೆ.

2. ದಿ:30.5.2015 ಕ್ಕಿಂತ ಮೂರು ದಿನಗಳ ಮೊದಲು ನನ್ನ ತಾಯಿ ಗೊಲ್ಲಹಳ್ಳಿಗೆ ಜಾತ್ರೆಗೆ ಬಂದಿದ್ದಳು, ನಾನು ಅಲ್ಲಿಗೆ ಹೋಗಿದ್ದೆ , ಆಗ ಅವಳನ್ನು ನೋಡಿದ್ದೆ. ಜಾತ್ರೆ ಮುಗಿಸಿಕೊಂಡು ನಾನು ಬೇಗ ನನ್ನ ಮನೆಗೆ ಬಂದೆ. ನಂತರ ನನ್ನ ತಾಯಿ ಬಂದಿದ್ದಾಳೆ. ನನ್ನ ತಾಯಿಗೆ ನಾನು ಆಗಾಗ ದೂರವಾಣಿ ಕರೆ ಮಾಡುತ್ತಾ ಇದ್ದೆ. ಹಾಗೆ ದಿ:30.5.2015 ರಂದು ನನ್ನ ತಾಯಿಗೆ ದೂರವಾಣಿ ಕರೆ ಮಾಡಿದಾಗ ಅವಳು ಉತ್ತರಿಸಲಿಲ್ಲ. ಆಗ ನಾನು ಸಂಶಯಗೊಂಡು ನನ್ನ ತಾಯಿಯನ್ನು ಹುಡುಕಾಡಿದೆ. ಹಾಗೆ ನನ್ನ ತಾಯಿ ಸಿಗದೇ ಇದ್ದುದರಿಂದ ನಾನು ಪೋಲಿಸರಿಗೆ ವಿಷಯ ತಿಳಿಸಿದೆ. ಹಾಗೆ ಪೋಲಿಸರು ನನಗೆ ನನ್ನ ತಾಯಿಯ ಶವ ಸಪ್ತಗಿರಿ ಆಸ್ಪತ್ರೆಯ ಶವಾಗಾರದಲ್ಲಿದೆ ಎಂದು ಹೇಳಿದರು. ನಾನು ಕೂಡಲೇ ಸಪ್ತಗಿರಿ ಆಸ್ಪತ್ರೆಯ ಶವಾಗಾರಕ್ಕೆ ದಿ:31.5.2015 ಕ್ಕೆ ಹೋದೆ. ಅಲ್ಲಿ ನನ್ನ ತಾಯಿಯ ಶವ ಇತ್ತು.

3. ನನ್ನ ತಂದೆಗೆ ಇಬ್ಬರು ಹೆಂಡಂದಿರು. ನನ್ನ ತಂದೆಯ ಚಿಕ್ಕ ಹೆಂಡತಿಯ

ಮಗಳನ್ನು ಆರೋಪಿಗೆ ಮದುವೆ ಮಾಡಿಕೊಡುವಂತೆ ಹೇಳಿದರು. ಆದರೆ ಅದಕ್ಕೆ ನನ್ನ ತಾಯಿ ಆರೋಪಿಯ ವರ್ತನೆ ಸರಿಯಿಲ್ಲ, ಆದ್ದರಿಂದ ಬೇಡ ಎಂದು ಹೇಳಿದಳು. ಹಾಗೆ ನನ್ನ ತಾಯಿ ಬೇಡ ಎಂದುದರಿಂದ ಆರೋಪಿಯು ದ್ವೇಷದಿಂದ ನನ್ನ ತಾಯಿಯ ಕೊಲೆ ಮಾಡಿದ್ದಾನೆ. ಹಾಗೆ ನನ್ನ ತಾಯಿಯು ಆರೋಪಿಯ ತಾಯಿಗೆ ಹಣವನ್ನು ಸಾಲವಾಗಿ ಕೊಟ್ಟಿದ್ದಳು. ಅದನ್ನು ವಾಪಸ್ ಕೊಡಲು ಕೇಳಿದಾಗ ಆರೋಪಿಯು ನನ್ನ ತಾಯಿಯ ಮೇಲೆ ದ್ವೇಷದಿಂದ ಇದ್ದ. ಆ ದ್ವೇಷದಿಂದಲೇ ಆರೋಪಿಯು ನನ್ನ ತಾಯಿಯ ಕೊಲೆ ಮಾಡಿದ್ದಾನೆ ಎಂದು ಹೇಳುತ್ತೇನೆ. ಈ ವಿಚಾರವನ್ನು ನಾನು ಪೋಲಿಸರಿಗೆ ತಿಳಿಸಿದ್ದೇನೆ.

**ಪಾಟಿಸವಾಲುಃ ಆರೋಪಿ ಪರವಾಗಿ**

ಆರೋಪಿ ಪರ ವಕೀಲರು ನ್ಯಾಯಾಲಯದ ಮುಂದೆ ಹಾಜರಿಲ್ಲ. ಆರೋಪಿಯು ಪಾಟಿಸವಾಲಿಗಾಗಿ ಸಮಯಾವಕಾಶವನ್ನು ಕೇಳುತ್ತಾನೆ , ಕೊಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

**ಓ. ಕೇ. ಹೇ. ಸರಿ ಇದೆ**

(ರಾಮಚಂದ್ರ ಡಿ. ಹುದ್ದಾರ್)
ಪ್ರಧಾನ ನಗರ ಮತ್ತು ಸತ್ರ ನ್ಯಾಯಾಧೀಶರು,
(ಸಿಸಿಹೆಚ್ - 01) ಬೆಂಗಳೂರು.